ಸಿವಿಲ್ ಮಿಸಿಲೆ. ನಂ. 1/2022

ಪಿ .ಡಬ್ಲ್ಯೂ: 1

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 25-09-2024 ರಂದು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎನ್ ವೈ ಎ ನ್ಯಾಯವಾದಿರವರಿಂದಃ

ಸರ್ವೆ ನಂಬರ್ 27/1 ರಲ್ಲಿ ದಾರಿ ಇರುವ ಬಗ್ಗೆ ನಾನು ಯಾವುದೇ ಭಾವ ಚಿತ್ರವನ್ನು, ಕಂದಾಯ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ . ಸರ್ವೆ ನಂಬರ್ 27/1 ರಲ್ಲಿ BC ಕಾಲುದಾರಿಯನ್ನು ಪ್ರತಿವಾದಿಯರು ದಿಃ 13-07-2020 ರಲ್ಲಿ ಆತಂಕ ಪಡಿಸಿರುತ್ತಾರೆ . ಪ್ರತಿವಾದಿಯವರು ಸದ್ರಿ ಕಾಲುದಾರಿಯನ್ನು ಬಂದ್ ಮಾಡಿರುವುದಿಲ್ಲ . ನಾನು ಸದ್ರಿ ಕಾಲುದಾರಿಯನ್ನು ಈಗಲೂ ಉಪಯೋಗಿಸುತ್ತಿದ್ದೇನೆ . ನಾನು ಈ ದಾವೆಯಲ್ಲಿ ಕೇಳುತ್ತಿರುವ ಕಾಲುದಾರಿಯು ಎಲ್ಲರೂ ಬಳಸುವ ಕಾಲುದಾರಿಯಾಗಿರುತ್ತದೆ . ಸರ್ವೆ ನಂಬರ್ 27/1 ರ ಮಧ್ಯದಲ್ಲಿ ನಾನು ಕೇಳುವಂತೆ BC ಕಾಲುದಾರಿಯು ಅಸ್ತಿತ್ವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ . ಸದ್ರಿ ಕಾಲುದಾರಿಯು ಅಸ್ತಿತ್ವದಲ್ಲಿ ಇರದೇ ಇರುವ ಕಾರಣ ನಾನು ಯಾವುದೇ ಭಾವ ಚಿತ್ರವನ್ನು, ಕಂದಾಯ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ . ಸರ್ವೆ ನಂಬರ್ 27/1 ರ ಉತ್ತರ ದಿಕ್ಕಿನಲ್ಲಿ ಇರುವ ಕಾಲುದಾರಿಯನ್ನು ಎಲ್ಲರೂ ಬಳಸುತ್ತಾ ಬರುತ್ತಿದ್ದಾರೆ ಆದ್ದರಿಂದ ನಾನು ಹೇಳುವಂತೆ BC ಕಾಲುದಾರಿಯು ಅಸ್ತಿತ್ವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ .

ಸರ್ವೆ ನಂಬರ್ 27/1 ರ ದಕ್ಷಿಣ ದಿಕ್ಕಿನಲ್ಲಿರುವ ಮುಖ್ಯ ರಸ್ತೆಯಲ್ಲೆ ನನ್ನ ವಾಹನದಲ್ಲಿ ಗೊಬ್ಬರ ಮತ್ತು ಬೆಳೆಯನ್ನು ಮನೆಗೆ ಸಾಗಿಸುತ್ತೇನೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರಿದು , ದಾವೆಯಲ್ಲಿ BC ಕಾಲುದಾರಿಯನ್ನು ನಾನು ಉಪಯೋಗಿಸುತ್ತಾ ಬರುತ್ತಿದ್ದೇನೆ . ಸದ್ರಿ ಕಾಲುದಾರಿಯನ್ನು ಹೊರತುಪಡಿಸಿ ಬೇರೆ ಯಾವುದೇ ಕಾಲುದಾರಿಯನ್ನು ಅಸ್ತಿತ್ವದಲ್ಲಿ ಇಲ್ಲ ಎಂದು ನುಡಿಯುತ್ತಾರೆ

ದಾವಾ ಹಾತ್ ನಕಾಶೆಯಲ್ಲಿ ಜೋಗದಿಂದ ಸಾಗರಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿ ಇದೆ ಎಂದರೆ ಸರಿ . ಆದರೆ ಅದು ಕಾಲುದಾರಿಯಾಗಗಿರುವುದಿಲ್ಲ . ಸದ್ರಿ ರಸ್ತೆಯು ನನ್ನ ಭಾಗಾಯತ್ ಜಮೀನಿನ ದಕ್ಷಿಣ ತಲೆವಾರಿಗೆ ಬರುತ್ತದೆ ಎಂದರೆ ಸಾಕ್ಷಿಯು ರಾಷ್ಟ್ರೀಯ ಹೆದ್ದಾರಿಯನ್ನು ಕಾಲುದಾರಿಯಾಗಿ ಉಪಯೋಗಿಸಲು ಬರುವುದಿಲ್ಲ ಎಂದು ನುಡಿಯುತ್ತಾರೆ . ನಾನು ಸದ್ರಿ ರಸ್ತೆಯಲ್ಲೆ ನನ್ನ ವಾಹನದಲ್ಲಿ ಗೊಬ್ಬರ ಮತ್ತು ಬಳೆಯನ್ನು ಸಾಗಿಸುತ್ತೇನೆ ಎಂದರೆ ಸರಿಯಲ್ಲ . ಸರ್ವೆ ನಂಬರ್ 27/1 ರ ಉತ್ತರ ದಿಕ್ಕಿನಲ್ಲಿರುವ ಕಾಲುದಾರಿಯನ್ನೆ ನಾನು ಹಾಗೂ ಸಾರ್ವಜನಿಕರು ಅವರ ಭಾಗಾಯತ್ ಜಮೀನನ್ನು ತಲುಪಲು ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ .

ಸಿವಿಲ್ ಮಿಸಿಲೆ. ನಂ. 1/2022

ಪಿ .ಡಬ್ಲ್ಯೂ: 1

ಸರ್ವೆ ನಂಬರ್ 27/1 ರಲ್ಲಿ ಅಡಿಕೆ ಭರಣಗಳು ದಕ್ಷಿಣೋತ್ತರವಾಗಿದೆ . ನಾನು ಹೇಳುವ BC ಕಾಲುದಾರಿಯು ಪೂರ್ವದಿಂದ ಪಶ್ಚಿಮಕ್ಕೆ ಹೋಗುತ್ತದೆ . ಅಡಿಕೆ ಭರಣಗಳು ದಕ್ಷಿಣೋತ್ತರವಾಗಿರುವುದರಿಂದ ಒಂದು ಅಡಿಕೆ ಭರಣದಿಂದ ಇನ್ನೊಂದು ಅಡಿಕೆ ಭರಣಕ್ಕೆ ದಾಟಿಕೊಂಡು ಹೋಗುವ ಸಂಧರ್ಭ ಬರುವುದರಿಂದ ನಾನು ಹೇಳುವಂತೆ BC ಕಾಲುದಾರಿಯು ಅಸ್ತಿತ್ವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ .ಸಾಕ್ಷಿಯು ಮುಂದುವರಿದು ನಾವು ಕಾಲುವೆ ಇದ್ದಾಗ ಕಾಲು ಸಂಕ ಹಾಕಿಕೊಂಡು ದಾಟುತ್ತೇವೆ ಎಂದು ನುಡಿಯುತ್ತಾರೆ .

ಸರ್ವೆ ನಂಬರ್ 27/3 ರಿಂದ 27/1 ರವರೆಗೆ ಸುಮಾರು 8-10 ಸಂಕಗಳು ಇವೆ . ಈಗಲೂ ಕೂಡಾ ಸದ್ರಿ ಸಂಕವು ಅಸ್ತಿತ್ವದಲ್ಲಿದೆ . ನಾನು ಹೇಳುವಂತೆ ಸಂಕಗಳು ಈಗ ಅಲ್ಲಿ ಇಲ್ಲ ಎಂದರೆ ಸರಿಯಲ್ಲ . ಸರ್ವೆ ನಂಬರ್ 27/1 ರ ಉತ್ತರ ದಿಕ್ಕಿನಲ್ಲಿರುವ ಇರುವ ಕಾಲುದಾರಿಯನ್ನು ಬಿಟ್ಟು ಪ್ರತಿವಾದಿಯವರು ಅವರ ಪೂರ್ತಿ ಜಮೀನಿನ ಸುತ್ತಲೂ ಬೇಲಿಯನ್ನು ಹಾಕಿಕೊಂಡು ವಹಿವಾಟಿ ಮಾಡಿಕೊಂಡು ಬಂದಿದ್ದಾರೆ ಎಂದರೆ ಸಾಕ್ಷಿಯು ಈ ದಾವೆಯನ್ನು ಸಲ್ಲಿಸಿದ ನಂತರ ಅಂದರೆ ದಿಃ 01-05-2021 ರಂದು ಪ್ರತಿವಾದಿಯವರು ಬೇಲಿಯನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ . ದಿಃ 01-05-2021 ರಂದು ಪ್ರತಿವಾದಿಯವರು ಬೇಲಿಯನ್ನು ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ನಾನು ಹೇಳುವ BC ಕಾಲುದಾರಿಯಿಂದ ಸರ್ವೆ ನಂಬರ್ 27/1 ರ ಉತ್ತರ ದಿಕ್ಕಿನಲ್ಲಿರುವ ಕಾಲುದಾರಿಗೆ ಎಷ್ಟು ಅಂತರ ಇದೆ ಎಂದರೆ ಸಾಕ್ಷಿಯು ನನಗೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ . ನಾನು ಹೇಳುವಂತೆ BC ಕಾಲುದಾರಿಯಿಂದ ಸರ್ವೆ ನಂಬರ್ 27/1 ರ ಉತ್ತರ ದಿಕ್ಕಿನಲ್ಲಿರುವ ಕಾಲುದಾರಿಯು ಸುಮಾರು 10 ಫೂಟ್ ಅಂತರದಲ್ಲಿದೆ ಎಂದರೆ ಸರಿಯಲ್ಲ . ನನ್ನ ಮನೆಗೆ ಹೋಗಲು 10 ಅಡಿ ಹತ್ತಿರ ವಾಗುತ್ತದೆ ಎಂಬ ಉದ್ದೇಶದಿಂದ BC ಕಾಲುದಾರಿಯನ್ನು ಹೊಸದಾಗಿ ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಸದ್ರಿ BC ಕಾಲುದಾರಿಯು 1965 ರಿಂದ ಅಸ್ತಿತ್ವದಲ್ಲಿದೆ ಎಂದು ನುಡಿಯುತ್ತಾರೆ .

ಸರ್ವೆ ನಂಬರ್ 27/1 ರ ಪೂರ್ವ ದಿಕ್ಕಿಗೆ ಶಾಂತಾರಾಮ ನಾರಾಯಣ ಗೌಡ ಅವರ ಸರ್ವೆ ನಂಬರ್ 27/2 ಬರುತ್ತದೆ . ನಮ್ಮ ಮನೆಯಿಂದ ಸರ್ವೆ ನಂಬರ್ 27/1 ನ್ನು ತಲುಪಲು 6 ಭರಣವನ್ನು ದಾಟಬೇಕಾಗುತ್ತದೆ . ಆದರೆ ಸರ್ವೆ ನಂಬರ್ 27/3 , 27/2 , ನ್ನು ದಾಟಿ ಬರಬೇಕಾಗುತ್ತದೆ . ಪ್ರತಿವಾದಿಯವರು ಸರ್ವೆ ನಂಬರ್ 27/1 ರ ಗಡಿಯಲ್ಲಿ ಆತಂಕ ಮಾಡಿರುತ್ತಾರೆ . ಸರ್ವೆ ನಂಬರ್ 27/1 ರ ಪಶ್ಚಿಮಕ್ಕೆ ಸರ್ವೆ ನಂಬರ್ 28 ಪುಟ್ಟಪ್ಪ ಅವರ ಜಮೀನು ಇದೆ . ಸರ್ವೆ ನಂಬರ್ 27/1 ರ ಮತ್ತು ಸರ್ವೆ

**ಸಿವಿಲ್ ಮಿಸಿಲೆ. ನಂ. 1/2022**

**ಪಿ .ಡಬ್ಲ್ಯೂ 1**

ನಂಬರ್ 28 ರ ನಡುವೆ ಒಂದು ಕಲ್ಲಿನ ಪಾಗಾರ ಇದೆ ಎಂದರೆ ಸರಿ . ಸಾಕ್ಷಿಯು ಮುಂದುವರಿದು , ಸದ್ರಿ ಕಲ್ಲಿನ ಪಾಗಾರವನ್ನು ಕಟ್ಟುವಾಗ ಮಧ್ಯದಲ್ಲಿ ದಾರಿಯನ್ನು 45 ವರ್ಷಗಳ ಹಿಂದೆ ಬಿಟ್ಟು ಕಟ್ಟಿರುತ್ತಾರೆ . ಸರ್ವೆ ನಂಬರ್ 28 ರ ಮಾಲೀಕರು ಈಗ ಒಂದು ಕರೆಂಟ್ ಬೇಲಿಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ದಾರಿಯನ್ನು ಬಿಟ್ಟು ಹಾಕಿಕೊಂಡಿದ್ದಾರೆ ಎಂದು ನುಡಿಯುತ್ತಾರೆ . ಸದ್ರಿಯವರು ಯಾವುದೇ ಕಾಲುದಾರಿಯನ್ನು ಬಿಟ್ಟು ಕರೆಂಟ್ ಬೇಲಿಯನ್ನು ಹಾಕಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ . ಸರ್ವೆ ನಂಬರ್ 28 ರ ಮಾಲೀಕರು ಸರ್ವೆ ನಂಬರ್ 27/1 ರ ಉತ್ತರ ದಿಕ್ಕಿನಲ್ಲಿ ಹಾದು ಹೋಗುವ ಕಾಲುದಾರಿಯನ್ನು ಬಿಟ್ಟು ಕರೆಂಟ್ ಬೇಲಿಯನ್ನು ಹಾಕಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . ನಾನು ಹೇಳುವಂತೆ BC ಕಾಲುದಾಯು ಅಸ್ತಿತ್ವದಲ್ಲಿರುವುದಿಲ್ಲ ಹಾಗೂ ಪ್ರತಿವಾದಿಯವರು ಆತಂಕ ಮಾಡಿರುವುದಿಲ್ಲ ಹಾಗೂ ಸದ್ರಿ ಕಾಲುದಾರಿಯನ್ನು ಬಂದ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ನಾನು ಸುಳ್ಳು ವ್ಯಾಜ್ಯ ಕಾರಣವನ್ನು ತೋರಿಸಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ .**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**